## ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆ: 1137/2024

**ಸಾಕ್ಷಿಯನ್ನು ದಿಃ 07.03.2026 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.**

| | | |
|---|---|---|
| ಹೆಸರು | ಸರಿತಾ | ಡಿ.ಡಬ್ಲ್ಯೂ: 1 |
| ಗಂಡನ ಹೆಸರು | ಮಹದೇವ ಶೆಟ್ಟಿ | |
| ವಯಸ್ಸು | 38 ವರ್ಷ | |
| ಕೆಲಸ | ಹೊಟೇಲ್ ಕೂಲಿ | |
| ವಾಸಸ್ಥಳ | ವಿಪಿ ಬೋರೆ. | |

## ಮುಖ್ಯ ವಿಚಾರಣೆಃ ಆರೋಪಿ ಪರ ಶ್ರೀ ಜಿ ಆರ್ ಎಸ್ ವಕೀಲರಿಂದಃ

ನಾನು ಪಿರ್ಯಾದುದಾರರೊಂದಿಗೆ ಯಾವುದೇ ವ್ಯವಹಾರ ಮಾಡಿಲ್ಲ. ನಾನು ಪಿರ್ಯಾದುದಾರರೊಂದಿಗೆ ಚೀಟಿ ವ್ಯವಹಾರ ಮಾಡಿದೆ. ಅದಕ್ಕೆ ನಾನು ಸದಸ್ಯೆ ಆಗಿದ್ದೆ. ನನಗೆ ವಕೀಲರ ನೋಟೀಸು ಬಂತು, ಏಕೆ ಕೊಟ್ಟೀದ್ದೀರಿ ಎಂದು ವಕೀಲರ ಕಛೇರಿಗೆ ಹೋಗಿ ಕೇಳಿದೆ. ಪಿರ್ಯಾದುದಾರರ ಮನೆಯ ಹತ್ತಿರ ಹೋಗಿ ಮಾತನಾಡುವಂತೆ ಹೇಳಿದರು. ನಾನು ಪಿರ್ಯಾದುದಾರರ ಮನೆಯ ಹತ್ತಿರ ಹೋದಾಗ ಎಲ್ಲರೂ ಸೇರಿ ಏಕೆ ಬಂದ್ದಿದೀಯಾ ಹೊಡೆಯಲು ಬಂದರು. ಬೀದಿಯಲ್ಲಿ ಬಂದು ಬೈಯುವುದು ಮಾಡಿದರು. ನನಗೆ ಮಾತನಾಡಲು ಬಿಡಲಿಲ್ಲ. ಇಲ್ಲಿ ನಿಲ್ಲಬೇಡ ಎಂದು ಹೇಳಿ ತಳ್ಳಿ ಹೊಡೆಯಲು ಬಂದರು. ನನ್ನ ಮನೆಯ ಹತ್ತಿರ

ಬಂದು ತುಂಬಾ ಗಲಾಟೆ ಮಾಡಿದ್ದಾರೆ. ನಾನು 4 ಬಾರಿ ವಕೀಲರ ಕಛೇರಿಯ ಹತ್ತಿರ ಹೋಗಿದ್ದೇನೆ. ಅಲ್ಲಿ ಕೂಡ ಮಾತನಾಡಲು ಅವಕಾಶ ಕೊಡಲಿಲ್ಲ.

**ಪಾಟೀಸವಾಲುಃ ಪಿರ್ಯಾದುದಾರರ ಪರ ಶ್ರೀ ಟಿ ಎಸ್ ವಕೀಲರಿಂದಃ**

ಪಿರ್ಯಾದುದಾರರು ನನಗೆ ಗೊತ್ತು. ಪಿರ್ಯಾದುದಾರರು 3 ವರ್ಷದಿಂದ ನನಗೆ ಗೊತ್ತು. ಪಿರ್ಯಾದುದಾರರೊಂದಿಗೆ ಚೀಟಿ ವ್ಯವಹಾರ ಮಾಡಿದ ಬಗ್ಗೆ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಹಾಜರುಪಡಿಸಿದ್ದೇನೆ. ನಿಪಿ-3 ರಲ್ಲಿ ನೋಟೀಸಿನಲ್ಲಿ ಏನು ಬರೆದಿದೆ ಎಂದು ಗೊತ್ತಿದೆಯೇ ಎಂದರೆ ನನಗೆ ಓದು ಬರಹ ಗೊತ್ತಿಲ್ಲ. ನಿಪಿ-3 ರ ನೋಟೀಸನ್ನು ಬೇರೆಯವರಿಂದ ಓದಿ ತಿಳಿದುಕೊಂಡಿದ್ದೀರಾ ಎಂದರೆ ಇಲ್ಲ. ನಾನು ನೇರವಾಗಿ ಪಿರ್ಯಾದುದಾರರ ವಕೀಲರ ಬಳಿ ಹೋಗಿದ್ದೇನೆ. ನಿಪಿ-3 ರ ನೋಟೀಸಿಗೆ ಬರವಣಿಗೆಯಲ್ಲಿ ಉತ್ತರಕೊಟ್ಟಿಲ್ಲ. ಕರೆಯಿಸಿ ಮಾತನಾಡಿಸಿದ್ದಾರೆ. ನಾನು ಪಿರ್ಯಾದುದಾರರ ಮನೆಗೆ ಹೋದಾಗ ಬೈದು ಹೊಡೆದರು ಎಂಬ ಬಗ್ಗೆ ಪೊಲೀಸರಿಗೆ ದೂರು ಕೊಟ್ಟಿದ್ದೀರಾ ಎಂದರೆ ಇಲ್ಲ. ನನ್ನ ಮನೆಯ ಹತ್ತಿರ ಬಂದು ಹೊಡೆದಿದ್ದಾರೆ ಎಂಬ ಬಗ್ಗೆ ಪೊಲೀಸರಿಗೆ ದೂರು ಕೊಟ್ಟಿದ್ದೀರಾ ಎಂದರೆ ಇಲ್ಲ.

ಸಾಕ್ಷಿಗೆ ವಕಾಲತ್ತಿನಲ್ಲಿರುವ ಸಹಿಯನ್ನು ತೋರಿಸಲಾಗಿ ತನ್ನದ್ದಲ್ಲ ಎಂದು ನುಡಿಯುತ್ತಾರೆ. ನಿಪಿ-1 ರ ಚೆಕ್ ನಮ್ಮದ್ದಲ್ಲ. ನಿಪಿ-1 (ಎ ) ಸಹಿ ನನ್ನದ್ದಲ್ಲ. ನಾನು ಪಿರ್ಯಾದುದಾರರೊಂದಿಗೆ ಹಣಕಾಸಿನ ವ್ಯವಹಾರ ಮಾಡಿದ್ದೇನೆ ಎಂದರೆ ಇಲ್ಲ. ನಾನು ಪಿರ್ಯಾದುದಾರರಿಂದ ರೂ.2 ಲಕ್ಷ ಸಾಲ ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಸಾಲದ ಹಣವನ್ನು ಮರುಪಾವತಿಸಬೇಕಾಗುತ್ತದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.